ಆಫೀಸ್ ಹೆಸರು.	ನಂಬರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡಿಷ್ಟ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ಅಡಿಷ್ಟ.	ರಿಜಿಸ್ಟ್ರಿಗೆ ಹಾಜರಾದದ್ದು	ರಿಜಿಸ್ಟರಾದ ತಾರೀಖು	ಸ್ವಭಾವ ಮತ್ತು ಕಿಮ್ಮತ್ತು.
ಮೈಸೂರು ಸಬ್ ರಿಜಿಸ್ಟ್ರಿ ಆಫೀಸ್.	ತಿರಸ್ಕರಿಸಿದ್ದು.	ಮೈಸೂರು ಮಂಡಿಮಹಲ್ಲಲ್ಲಿ ವಲ್ಲಿರುವ ಬೋರಯ್ಯನ ಮಗ ಸಿದ್ದಯ್ಯ ಈತನ ಮಗ ಬೋರಣ್ಣ ಸಹ.	ಮೈಸೂರು ಬನವನಮಹಲ್ಲಿಯಲ್ಲಿರುವ ರಾಮರಾಯರ ಮಕ್ಕಳು ಧನಾಭಿವೃದ್ಧಿ ಬ್ಯಾಂಕ್ ಪಿಜಾಂಟ್ ಕೇಪಗಿರಿರಾವ್.	22 1 85	26 5 85	ನಾವುಗಳು ಧನಾಭಿವೃದ್ಧಿ ಬ್ಯಾಂಕ್‌ಗೆ ಕೊಡಬೇಕಾದ ಮೊಬಲಗು ವೈಕಿ ಕೊಟ್ಟಿರುವದು ಜಾತಾ ಮೊಬಲಗು 282–3–3ನ್ನು ಒಂದು ತಿಂಗಳ ವಳಗೆ ಕೊಡುತ್ತೇವೆಂದು ಮತ್ತು ಮೇಲ್ಕಂಡ ಮೊಬಲಗ್ಕೆ ಮಂಡಿ ಮಹಲೆಯಲ್ಲಿರುವ ಮನೆಯನ್ನು ಆಧಾರಮಾಡಿರುವದಾಗಿ.
	ಡಿಟೋ	ಮೈಸೂರು ಲಷ್ಕರ್ ಮುಹಲೆಯಲ್ಲಿರುವ ಕಾವೆಲ್ ಶಟ್ಟರ ಮಗ ಜವಿರ್ಜಿ ಜೀವನೆ ಮಾಡುವ ಸುಬ್ಬಾನಾಯಡು.	ಮೈಸೂರು ಲಷ್ಕರ್ ಮಹಲೆಯಲ್ಲಿರುವ ದಾಸಪ್ಪನ ಮಗ ವೆಂಕಟಪ್ಪ.	23 4 85	10 10 85	ಮೈಸೂರು ಲಷ್ಕರ್ ಮುಹಲೆಯಲ್ಲಿರುವ ಮನೆಯನ್ನು ಆಧಾರ ಮಾಡಿ 60 ರೂಪಾಯಿಗಳು ತಗದುಕೊಂಡಿರುವದನ್ನು ಕೇಕಡಾ ಮಾಹೆ 1ಕ್ಕೆ ಒಂದು ರೂಪಾಯಿ ಮೇರೆ ಅಸಲು ಬಡ್ಡಿ ಸಹ ಯೆರಡು ಪಿಸ್ತಾಗಿ ಪಾವತಿ ಮಾಡುವದಾಗಿ.

ಯಂ. ಅಂಕಾಜೀರಾವ್,
ರಜಿಸ್ಟ್ರಾರ್.

ನೋಟಿಫಿಕೇಷ್ಟ.

ತಾರೀಖು 27ನೇ ಸೆಪ್ಟಂಬರ್ 1889.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಅನುಪಯೋಗಕರವಾದ್ದೆಂದು ನಿಶ್ಚಯಿಸಲ್ಪಟ್ಟಿರುವ ಒಂದು ಕಂಭವುಳ್ಳ ಪೇರಾ ಒಂದು ಮತ್ತು ರೌಟೀಯೂ ಸಹ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕ್ಯಾಸರ್‌ವೇಟರ್ ಸಾಹೆಬರವರ ಆಫಿಸ್ ಬಳಿ ಸ್ಯ 1889ನೇ ಇಸವಿ ನವಂಬರ್ 1ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜಿ ಮೂಲಕ ವಿಕ್ರಯಿಸಲ್ಪಡುವದು.

ಸಿ. ನಾರಾಯಣರಾವ್,
ಅಸಿಸ್ಟೆಂಟ್ ಕ್ಯಾಸರ್‌ವೇಟರ್ ಆಫ್ ಫಾರೆಸ್ಟ್ಸ್.

ನಗರ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 67.

ವೃತಪಟ್ಟ ದುಮ್ಮದ ರುದ್ರಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ದುಮ್ಮದ ಭದ್ರೇಗವ್ವಡ, ವೃತಪಟ್ಟ ಸದರೀ ರುದ್ರಪ್ಪನಿಗೆ ಸಹೋದರನ ಮಗನು ಅಗಬೇಕೆಂಬ ಹಕ್ಕುದಾರಿ ಮೇಲೆ ನಗರ ತಾ॥ ದುಮ್ಮದ ಸ್ಥಳದ ಭದ್ರೇಗವ್ವಡನು ಸದರಿ ದುಮ್ಮದ ವಾಸಸ್ಥರಾಗಿ ವೃತಪಟ್ಟ ರುದ್ರಪ್ಪನಜಿಂದಗಿ ಬಗ್ಯಾಗಿ ಬರತಕ್ಕ 10,000 ರೂಪಾಯಿ ಸೂಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಭದ್ರೇಗವ್ವಡನ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ರುದ್ರಪ್ಪನ ಆಸ್ತಿಗೆ ಹಕ್ಕುದಾರರಾದ ವಿಶ್ವರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 69.

ವೃತಪಟ್ಟ ದಾಸಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕರಿಯಂಣನ ಮಗ ಕೆಂಚ, ವೃತಪಟ್ಟ ಸದರೀ ದಾಸಂಣನಿಗೆ ತಮ್ಮನ ಮಗನು ಅಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ತಾ॥ ಸಿದ್ದರಹಳ್ಳಿ ಸ್ಥಳದ ಕೆಂಚನು ಶಿವಮೊಗ್ಗ ತಾ॥ಪೊ ಮ್ಮನಕಟ್ಟೆ ವಾಸಸ್ಥನಾಗಿ ವೃತಪಟ್ಟ ದಾಸಂಣನ ಜಿಂದಗಿ ಬಗ್ಯಾಗಿ ಬರತಕ್ಕ 160 ರೂಪಾಯಿ ಸೂಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕೆಂಚನ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟಿ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾಸಂಣನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 74.

ಮೃತಪಟ್ಟ ಹನುಮಕ್ಕನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ರಂಗಮ್ಮನು, ಮೃತಪಟ್ಟ ಸದರೀ ಹನುಮಕ್ಕನಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ತರೀಕೆರೇ ಸ್ಥಳದ ರಂಗಮ್ಮನು ತರೀಕೆರೆ ವಾಸಸ್ಥಳಾಗಿ ಮೃತಪಟ್ಟ ಹನುಮಕ್ಕನ ಜಿಂದಗಿ ಬಿಗ್ಯಾಗಿ ಬರತಕ್ಕ 100 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಿಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರಿ ದರಖಾಸ್ತುದಾರಳಾದ ರಂಗಮ್ಮನ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟಿ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಕ್ಕನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 77.

ಮೃತಪಟ್ಟ ವಿ. ಸುಬ್ಬಾಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರಾಮನಾಥಯ್ಯನು, ಮೃತಪಟ್ಟ ಸದರೀ ಸುಬ್ಬಾಯನಿಗೆ ಅವಿಭಕ್ತ ಸಹೋದರನು ಆಗಬೇಕೆಂಬ ಹಕ್ಕುದಾರಿ ಮೇಲೆ ನಗರ ಈಸಬೂ ಸ್ಥಳದ ರಾಮನಾಥಯ್ಯನು ನಗರ ವಾಸಸ್ಥನಾಗಿ ಮೃತಪಟ್ಟ ಸುಬ್ಬಾಯನ ಜಿಂದಗಿ ಬಿಗ್ಯಾಗಿ ಬರತಕ್ಕ 300 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಿಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರಾಮನಾಥಯ್ಯನ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟಿ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಾಯನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಸೆಪ್ಟಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ಸಹಿ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ತಾರೀಖು 13ನೇ ಸೆಪ್ಟಂಬರ್ 1889.

ಇದರಿಂದ ಸಕಲ ಜನರಿಗೂ ತಿಳಿಯಪಡಿಸುವದೇನಂದರೆ, ರೇಲ್ವೆ ಕಂಟ್ರಾಕ್ಟುದಾರ ಕೈಕೋಬಾದ್ ಸಾಹೆಬರ ಕಡೆ ಉಮ್ಮಣ್ಣನೆಂಬುವನು ಜನ್ನಗಿರೀ ಡಿಪೋದಲ್ಲಿ 1 ಸಾಗವಾನೀ ಬೆಲಗನ್ನು ಕೊಂಡು ಕೊಂಡು 1 ವರುಷವೂ 9 ತಿಂಗಳಾದಾಗ್ಯೂ ರಫ್ತು ಮಾಡದೇ ಇರುವದ್ದರಿಂದ ಸದರೀ ಉಮ್ಮಣ್ಣನೆಂಬುವನೇ ಆಗಲಿ ಅವನ ಕಡೇಯವರೇ ಆಗಲಿ ತಮ್ಮ ಪಕ್ಕನ್ನು ಸ್ಥಿರಪಡಿಸಿ ಸರಕಾರಕ್ಕೆ ಸಲ್ಲತಕ್ಕ ಬಾಡಿಗೆ ಪಾವತಿಯಿಂದ ಸದರೀ ಬೆಲಗನ್ನು ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ರಫ್ತು ಮಾಡಿಕೊಳ್ಳಬೇಕು, ಇದಕ್ಕೆ ತಪ್ಪಿದರೆ ಸದರೀ ಬೆಲಗು ಹರಾಜು ಮಾಡಲ್ಪಡುತ್ತದೆ.

ಇ. ಪಿ. ಲೌರಿ,
ಅಸಿಸ್ಟೆಂಟ್ ಕಲೆಕ್ಟರ್.

ಚಿತ್ರದುರ್ಗ ಡಿವಿಜ್ಞ.

ಪ್ರಕಟನೆ.

ತಾರೀಖು 15ನೇ ಸೆಪ್ಟಂಬರ್ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಿರಿಯೂರು ತಾ॥ ವೊಡುವಳ್ಳಿ, ಬಳ್ಳಿ, ಮಾದಿರಹಳ್ಳಕ್ಕೆ ಅಡ್ಡವಾಗಿ ಬಂದು ಹೊಸ ಕೆರೆ ಕಟ್ಟಿಸತಕ್ಕ ಬಗ್ಯೆ ಸ್ 1889ನೇ ಇಸವಿ ಅಕ್ಟೋಬರ್ ಮಾಹೆ 15ನೇ ತಾರೀಖು ವರೆಗೆ ಚಿತ್ರದುರ್ಗ ಡಿವಿಜ್ಞ ಯ ನ್ಯಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಮೊಹರಾದ ಟೆಂಡರುಗಳು ತೆಗದು ಕೊಳ್ಳಲ್ಪಡುತ್ತೆ. ಅಂದಾಜಾದಲ್ಲಿ ಕಂಡ ಬಾಬುವಾ